ಆ) ಸದರಿ ಓವರ್‌ಹೆಡ್ ಟ್ಯಾಂಕ್ ನಿಂದ ಶ್ರೀರಾಮನಗರ, ಇಡ್ಲಿ ಕಾಲೋನಿ, ಚೌಡರೆಡ್ಡಿ ಪಾಳ್ಯ, ಕೀರ್ತಿನಗರ, ಟಿಪ್ಪುನಗರ ಮತ್ತು ಎಪಿಎಂಸಿ ಪ್ರದೇಶಗಳಿಗೆ ನೀರನ್ನು ಒದಗಿಸಲಾಗುತ್ತಿತ್ತು.

ಇ) ಬಂದಿದೆ.

ಈ) 5.00 ಲಕ್ಷ ಲೀಟರ್ ಸಾಮರ್ಥ್ಯದ ಆರ್.ಸಿ.ಸಿ. ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಾಣಕ್ಕೆ ರೂ. 22.00 ಲಕ್ಷ ಬೇಕಾಗುತ್ತದೆ. ಈ ಮೊಬಲಗನ್ನು ಚಿಂತಾಮಣಿ ಪಟ್ಟಣದ ನೀರು ಸರಬರಾಜು ಯೋಜನೆಯ ಪರಿಷ್ಕೃತ ಅಂದಾಜಿನಲ್ಲಿ ಸೇರಿಸಲು ಕ್ರಮ ಜರುಗಿಸಲಾಗುವುದು.

ಡಾ: ಎಂ.ಸಿ. ಸುಧಾಕರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಸುಮಾರು ಆರು ಬಡಾವಣೆಗಳಿಗೆ ಸುಮಾರು ಎರಡು ವರ್ಷಗಳಿಂದ ನೀರಿನ ಒಂದು ಸೌಲಭ್ಯ ಇಲ್ಲ. ನಂತರ ಇದನ್ನು ಪರಿಷ್ಕೃತ ಒಂದು ಅಂದಾಜಿನಲ್ಲಿ ಸೇರಿಸಿದ್ದೇವೆ ಎಂದು ಉತ್ತರವನ್ನು ಕೊಡುತ್ತಾರೆ. ಆ ಪರಿಷ್ಕೃತ ಅಂದಾಜು ಏನು, ಮತ್ತು ಅದು ಎಷ್ಟು ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಅದು 22 ಲಕ್ಷ ರೂಪಾಯಿಗಳಾಗುತ್ತದೆ. ಅದನ್ನು ಕಟ್ಟಿಕೊಡತಕ್ಕ ಕೆಲಸವನ್ನು ಮಾಡುತ್ತೇವೆಂದು ತಮ್ಮ ಮೂಲಕ ಹೇಳುತ್ತೇನೆ.

ಡಾ: ಎಂ.ಸಿ. ಸುಧಾಕರ್ : ಮಾನ್ಯ ಅಧ್ಯಕ್ಷರೆ ಚಿಂತಾಮಣಿ ಪಟ್ಟಣಕ್ಕೆ ನೀರಿನ ಸರಬರಾಜು ಯೋಜನೆಯ ಪರಿಸ್ಕೃತ ಅಂದಾಜು ಎಂದು ಹೇಳುತ್ತಾರೆ. ಅದು ಬರೀ ಒಂದು ಓವರ್‌ಹೆಡ್ ಟ್ಯಾಂಕ್ ಮಾತ್ರವೇ ಅಥವಾ ಬೇರೆ ಯಾವುದಾದರೂ ಒಂದು ಪರಿಷ್ಕೃತ ಅಂದಾಜು ಮಾಡಿದ್ದಾರೋ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಓವರ್‌ಹೆಡ್ ಟ್ಯಾಂಕನ್ನು ಕಟ್ಟಿಸುವಂಥದ್ದು ಸರ್ಕಾರದ ಗಮನದಲ್ಲಿದೆ. ಅದನ್ನು ಸರ್ಕಾರ ಕಟ್ಟಿಸುತ್ತದೆ. ಉಳಿದ ಅಂದಾಜನ್ನು ಬೇರೆ ತೆಗೆದುಕೊಂಡು ಚಿಂತನೆಯನ್ನು ಮಾಡೋಣ.

ಹುಕ್ಕೇರಿ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಕುರಿತು

133(596) ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ (ಹುಕ್ಕೇರಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹುಕ್ಕೇರಿ ಕ್ಷೇತ್ರದಲ್ಲಿ ಬರುವ ಹುಕ್ಕೇರಿ ಪಟ್ಟಣ ಮತ್ತು ಸಂಕೇಶ್ವರ ಪಟ್ಟಣಗಳ 18 ಗ್ರಾಮ ಪಂಚಾಯತ್‌ಗಳಿಗೆ 15 ದಿನಕ್ಕಮ್ಮೆ ನೀರು ಸರಬರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಈ ಸಮಸ್ಯೆಗೆ ಕಾರಣಗಳಾವುವು;

ಇ) ಈ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಯವರು) :

ಅ) ಬಂದಿದೆ

ಆ) ಹುಕ್ಕೇರಿ ಸಂಕೇಶ್ವರ ಪಟ್ಟಣಗಳು ಹಾಗೂ 16 ಹಳ್ಳಿಗಳಿಗೆ ನೀರು ಸರಬರಾಜು ಯೋಜನೆಯನ್ನು ಸಂಕೇಶ್ವರ ಪುರಸಭೆಯವರು ನಿರ್ವಹಿಸುತ್ತಿದ್ದು, ನಾಲ್ಕು ದಿನಕ್ಕೊಮ್ಮೆ ಕ್ಲಾರಿಂಫೈಡ್ ನೀರನ್ನು ಪಟ್ಟಣಗಳಿಗೆ ಹಾಗೂ ಹಳ್ಳಿಗಳಿಗೆ ಸರಬರಾಜು ಮಾಡಲಾಗುತ್ತಿದೆ. ಈ ಯೋಜನೆಯ

ನಿರ್ವಹಣಾ ವೆಚ್ಚವನ್ನು ಹುಕ್ಕೇರಿ, ಸಂಕೇಶ್ವರ ಪುರಸಭೆಗಳೂ ಹಾಗು ಮಾರ್ಗಮಧ್ಯದ 16 ಹಳ್ಳಿಗಳಿಗೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳು ಭರಿಸಬೇಕಾಗಿದ್ದು, ಇವುಗಳು ವೆಚ್ಚವನ್ನು ಭರಿಸದೇ ಇರುವುದರಿಂದ ನೀರು ಸರಬರಾಜು ವ್ಯವಸ್ಥೆಯಲ್ಲಿ ಪದೇ ಪದೇ ವ್ಯತ್ಯಾಯ ಉಂಟಾಗುತ್ತಿದೆ. ನೀರು ಸರಬರಾಜು ವ್ಯತ್ಯಾಯಕ್ಕೆ ಅಗತ್ಯ ಬೇಕಾದ ತಾಂತ್ರಿಕ ಮತ್ತು ನಿರ್ವಹಣಾ ದುರಸ್ಥಿ ಕಾಮಗಾರಿಗಳನ್ನು ಪುರಸಭೆಯವರು ಸುವ್ಯವಸ್ಥಿತವಾಗಿ ನಿರ್ವಹಿಸದೇ ಇರುವುದರಿಂದ ನೀರು ಸರಬರಾಜು ವ್ಯವಸ್ಥೆಯಲ್ಲಿ ಪದೇ ಪದೇ ವ್ಯತ್ಯಯ ಉಂಟಾಗುತ್ತಿದೆ. ಈ ಯೋಜನೆಯನ್ನು ನಿರ್ವಹಿಸುತ್ತಿರುವ ಸಂಕೇಶ್ವರ ಪುರಸಭೆಯಲ್ಲಿ ನೀರು ಸರಬರಾಜು ನಿರ್ವಹಣೆಗೆ ಅಗತ್ಯವಾಗಿ ಬೇಕಾದ ತಾಂತ್ರಿಕ ಮತ್ತು ನಿರ್ವಹಣಾ ಸಿಬ್ಬಂದಿ ಹಾಗೂ ಆರ್ಥಿಕ ಕೊರತೆಯಿಂದಾಗಿಯೂ ಸಹ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿರುತ್ತದೆ.

ಇ) ಸಂಕೇಶ್ವರ ಕ್ಷೇತ್ರದ ಮಾನ್ಯ ಶಾಸಕರು ದಿನಾಂಕ 2.12.2003ರಂದು ಎಲ್ಲಾ ಗ್ರಾಮ ಪಂಚಾಯತ್ ಹಾಗೂ ಪುರಸಭೆ ಸದಸ್ಯರ ಮತ್ತು ಅಧ್ಯಕ್ಷರುಗಳ ಸಭೆಯನ್ನು ಮಂಡಳಿ ಅಧಿಕಾರಿಗಳ ಸಮ್ಮುಖದಲ್ಲಿ ಕರೆದು, ನೀರು ಸರಬರಾಜು ನಿರ್ವಹಣೆ ವೆಚ್ಚವನ್ನು ಎಲ್ಲಾ ಹಳ್ಳಿಯವರು ಅವರು ಬಳಸುವ ನೀರಿನ ಪ್ರಮಾಣಕ್ಕೆ ತಕ್ಕಂತೆ ಭರಿಸಲು ಕ್ರಮ ಜರುಗಿಸಲು ತಿಳಿಸಿದ್ದು, ಸದರಿ ವಿಷಯಕ್ಕೆ ಎಲ್ಲಾ ಗ್ರಾಮ ಪಂಚಾಯತ್ ಹಾಗೂ ಪುರಸಭೆ ಪ್ರತಿನಿಧಿಗಳು ಸಮ್ಮತಿಸಿದ್ದು, ಈವರೆಗೂ ಹಣ ಸಂಗ್ರಹಿಸುವಲ್ಲಿ ಕ್ರಮ ಜರುಗಿಸದೆ ಇರುವುದರಿಂದ ಸದರಿ ಯೋಜನೆಯ ನಿರ್ವಹಣೆಯಲ್ಲಿ ವ್ಯತ್ಯಯ ಅದೇ ರೀತಿ ಮುಂದುವರೆದಿರುತ್ತದೆ. ಈ ಬಗ್ಗೆ ಗ್ರಾಮ ಪಂಚಾಯತ್ ಹಾಗೂ ಪುರಸಭೆ ಪ್ರತಿನಿಧಿಗಳು ಸೂಕ್ತ ಕ್ರಮ ಜರುಗಿಸಬೇಕಾಗುತ್ತದೆ.

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ (ಹುಕ್ಕೇರಿ) : ಮಾನ್ಯ ಅಧ್ಯಕ್ಷರೆ, ಹುಕ್ಕೇರಿ ಪಟ್ಟಣ ಪಂಚಾಯಿತಿ ಮತ್ತು ಸಂಕೇಶ್ವರ ನಗರಸಭೆಯಲ್ಲಿ ಕಳೆದ ಐದಾರು ವರ್ಷಗಳಿಂದಲೂ ನೀರು ಸರಬರಾಜನ್ನು ಕೆಯುಡಬ್ಲ್ಯುಎಸ್ ನವರು ಪೈಪ್‌ಲೈನ್ ಮುಖಾಂತರ ಹಿಡಕಲ್ ಡ್ಯಾಮ್‌ನಿಂದ ನೀರನ್ನು ತಂದು ಒದಗಿಸುವುದು ನಡೆದಿದೆ. ನಿಜವಾಗಿಯೂ ಈ ಕೊಳವೆ ಮೂಲಕ ನೀರನ್ನು ಹರಿಸುವಂಥದ್ದು ವ್ಯವಸ್ಥಿತವಾಗಿ ನಡೆದಿಲ್ಲ. ಮೇಲಿಂದ ಮೇಲೆ ಅಲ್ಲಿ ಒಡೆದು 15 ದಿವಸಗಳವರೆಗೂ ಅಲ್ಲಿ ನೀರು ಸಿಗಲಾರದ ಪರಿಸ್ಥಿತಿ ಒದಗಿದೆ. ಮೊದಲು ಪರಿಸ್ಥಿತಿ ಸ್ವಲ್ಪ ಸರಿ ಇತ್ತು ಎನಿಸುತ್ತದೆ. ಏಕೆಂದರೆ ನೀರು ಬರುತ್ತದೆ ಎಂದಾಗ ಜನರೆಲ್ಲಾ ಅದಕ್ಕೆ ಒಂದು ರೀತಿ ಅಡಿಕ್ಟ್ ಆಗಿರುತ್ತಾರೆ. ಇನ್ನು 15 ದಿವಸದಲ್ಲಿ ನೀರು ಇಲ್ಲ ಎಂದಕೂಡಲೇ ನೀರು ತರುವುದು ಬಹಳ ತೊಂದರೆ ಇದೆ. ಅಲ್ಲಿ ಸುತ್ತಮುತ್ತ 15 ಬೋರ್‌ವೆಲ್‌ಗಳು ಹುಕ್ಕೇರಿ ಪಟ್ಟಣದಲ್ಲಿದೆ. ಆ ಬೋರ್‌ವೆಲ್‌ನಲ್ಲೂ ಸಹಿತ ಇವತ್ತು ನೀರಿಲ್ಲ. ಮೊದಲು ಹುಕ್ಕೇರಿಯಲ್ಲಿ ಕಾರಂಜಿಗಳಿದ್ದವು. ಆ ಕಾರಂಜಿಗಳು ಸಹಿತ ಇವತ್ತು ಬತ್ತಿಹೋಗಿರುವುದರಿಂದ ನೀರು ಎಲ್ಲಿಯೂ ಸಿಗಲಾರದ ಪರಿಸ್ಥಿತಿ ಇದೆ. ಆ ಕಾರಣದಿಂದ ಈ ಎಲ್ಲಾ ತೊಂದರೆಗಳನ್ನು ಸರ್ಕಾರ ಯಾವ ರೀತಿ ನಿವಾರಣೆ ಮಾಡುತ್ತೀರಿ ಎಂದು ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ತಾವು ಉತ್ತರವನ್ನು ಸಹಾ ಒದಗಿಸಿದ್ದೀರಿ. ಆ ಪಟ್ಟಣ ಪಂಚಾಯಿತಿ ಮತ್ತು ಪುರಸಭೆ ಮತ್ತು 18 ಗ್ರಾಮ ಪಂಚಾಯಿತಿಯವರು ಆ ದುಡ್ಡನ್ನು ಕೊಡಬೇಕು ಎಂದು ಮೊದಲು ಅಲ್ಲಿ ಮಾಜಿ ಶಾಸಕರು ಒಂದು ಸಭೆಯನ್ನು ತೆಗೆದುಕೊಂಡಾಗ ಆ ಎಲ್ಲಾ ಪಂಚಾಯಿತಿಯವರು ಮತ್ತು ಎರಡು ಪುರಸಭೆಯವರು ದುಡ್ಡನ್ನು ತುಂಬಬೇಕು, ಆಗ ಸರಿಯಾಗಿ ನಡೆಯುತ್ತದೆ. ಇವತ್ತಿಗೂ ಸಹಾ ಅಲ್ಲಿ ದುಡ್ಡು ತುಂಬಿ ಅಲ್ಲಿ ಸರಿಯಾಗಿ ನಡೆದಿಲ್ಲ. ಆದರೆ ಪ್ರತಿ

ಪಂಚಾಯಿತಿಗೆ ಅಥವಾ ಆ ಎರಡೂ ಪಟ್ಟಣಗಳಿಗೆ ಎಷ್ಟು ಹಣವನ್ನು ಭರಿಸಬೇಕಾಗುತ್ತದೆ ಎಂದು ಇಲ್ಲಿ ಸ್ಪಷ್ಟವಾಗಿ ಕೊಟ್ಟಿಲ. ಅದರ ಬಗ್ಗೆ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಹುಕ್ಕೇರಿ ಮತ್ತು ಸಂಕೇಶ್ವರ ಪಟ್ಟಣಗಳು ಮತ್ತು 16 ಹಳ್ಳಿಗಳು ಘಟಪ್ರಭಾ ನದಿಯಿಂದ ಸಮಗ್ರ ನೀರು ಯೋಜನೆಯನ್ನು ಮಾಡಿದೆ. ಅದಕ್ಕೆ ಈಗಾಗಲೇ 1250 ಲಕ್ಷ ರೂ ವೆಚ್ಚದಲ್ಲಿ ಕೆಲಸಗಳನ್ನು ಪೂರ್ಣಗೊಳಿಸಿದೆ. ಅದು 19–6–99 ರಲ್ಲಿ ಚಾಲನೆ ಕೂಡ ಆಗಿದೆ. ಈ ಯೋಜನೆಯನ್ನು ಮಾಡಿದ ನಂತರ ಇದರ ನಿರ್ವಹಣೆಗೆ ಪುರಸಭೆ ಸಂಕೇಶ್ವರ, 2002ರಲ್ಲಿ ಹಸ್ತಾಂತರ ಮಾಡಲಾಗಿದೆ. ಈ ಯೋಜನೆಯಲ್ಲಿ ದಿನವೂ 3.50 ದಶಲಕ್ಷ ಗ್ಯಾಲನ್ ನೀರನ್ನು ಸರಬರಾಜು ಮಾಡುತ್ತಿದ್ದೇವೆ. ಆದರೆ ಇದರಲ್ಲಿ ಇದಕ್ಕೆ ಹಣವನ್ನು ಅವರೇನು ಕೊಡಬೇಕಾಗಿದೆ, ಸಂಕೇಶ್ವರ ಮತ್ತು ಹುಕ್ಕೇರಿ ಪಟ್ಟಣ ಪಂಚಾಯಿತಿಗಳು, ಅವುಗಳು ಕೊಡುತ್ತಿಲ್ಲವಾದ ಕಾರಣ ನಾವು ನೀರನ್ನು ಸಮರ್ಪಕವಾಗಿ ಕೊಡುತ್ತಿಲ್ಲ. ಈಗ ಈ ದುರಸ್ತಿ ಕಾಮಗಾರಿಗಳಿಗೆ ಹತ್ತು ಲಕ್ಷ ರೂಪಾಯಿಗಳ ಹಣ ಬೇಕಾಗಿದೆ. ಪ್ರತಿ ತಿಂಗಳೂ ನಿರ್ವಹಣಾ ವೆಚ್ಚ ವಿದ್ಯುತ್ ಬಿಲ್‌ನ್ನು ಹೊರತುಪಡಿಸಿ ಐದು ಲಕ್ಷ ರೂಪಾಯಿಗಳನ್ನು ಇದಕ್ಕೆ ಅಂದಾಜು ಮಾಡಲಾಗಿದೆ. ಈ ಬಗ್ಗೆ ಈ ಗ್ರಾಮ ಪಂಚಾಯಿತಿ ಮತ್ತು ಪುರಸಭೆಗಳು ಸೂಕ್ತ ಕ್ರಮವನ್ನು ಜರುಗಿಸುವುದಕ್ಕೆ 16 ಹಳ್ಳಿಗಳಿಗೂ ಕೂಡ ನೀರು ಸರಬರಾಜು ಮಾಡಲು ಸಾಧ್ಯವಾಗುತ್ತದೆ. ಅದಕ್ಕೆ ಈ ಹಣವನ್ನು ಎರಡು ಪುರಸಭೆಗಳು ಮತ್ತು ಆ ಪಂಚಾಯಿತಿಗಳಿಂದ ಕೊಟ್ಟಿದ್ದೇ ಆದರೆ ಇದನ್ನು ಸಮರ್ಪಕವಾಗಿ ನೀರನ್ನು ಕೊಡುವಂಥ ಕೆಲಸವಾಗುತ್ತದೆ. ಇದರ ಬಗ್ಗೆ ಮೊತ್ತೊಮ್ಮೆ ಪರಿಶೀಲಿಸುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೂ ಕೂಡ ಸೂಚನೆಯನ್ನು ಕೊಟ್ಟು ಮಾಡುತ್ತೇವೆ. ಏಕೆಂದರೆ ನೀರು ಬಹಳ ಅಗತ್ಯ ಇರುವುದರಿಂದ. ಇದಕ್ಕೆ ಯಾವ ತರಹ ಸರ್ಕಾರದಿಂದ ಏನಾದರೂ ಮಾಡುವುದಕ್ಕೆ ಅವಕಾಶ ಇದೆಯೇ ಎಂದು ನೋಡಿ ನಾನು ಅದನ್ನು ಪರಿಶೀಲಿಸಿ ಅದನ್ನು ಮಾಡಿಸುತ್ತೇನೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ : ಮಾನ್ಯ ಅಧ್ಯಕ್ಷರೆ, ಈಗ ಹೋದ ತಿಂಗಳು ಮಾನ್ಯ ತಹಶೀಲ್ದಾರ್‌ರವರ ಅಧ್ಯಕ್ಷತೆಯಲ್ಲಿ ಕೆಯುಡಬ್ಲ್ಯುಎಸ್‌ನವರು ಹಾಗೂ ಈ 18 ಪಂಚಾಯಿತಿ ಅಧ್ಯಕ್ಷರು ಮತ್ತು ಎರಡು ಪುರಸಭೆಗಳ ಕಾರ್ಯದರ್ಶಿಗಳು ಪಟ್ಟಣ ಪಂಚಾಯಿತಿ ಯವರು ಒಂದು ಸಭೆಯನ್ನು ಹಿಡಕಲ್ ಡ್ಯಾಮ್‌ನಲ್ಲಿ ಮಾಡಿದ್ದೆವು. ಆ ಸಭೆಯಲ್ಲಿ ಅಂದಾಜು ಈ ಎರಡೂ ಪಟ್ಟಣ ಪಂಚಾಯಿತಿ ಸಂಕೇಶ್ವರ ಪಟ್ಟಣ ಪಂಚಾಯಿತಿ 21 ಲಕ್ಷ ರೂ ಅದರ ಜೊತೆಗೆ ಹುಕ್ಕೇರಿ ಪಟ್ಟಣ ಪಂಚಾಯಿತಿ ಎಂಟು ಲಕ್ಷ ರೂ ಪ್ರತಿ ಗ್ರಾಮ ಪಂಚಾಯಿತಿಯವರೂ 85 ಸಾವಿರ ರೂಪಾಯಿಗಳನ್ನು ಪ್ರತಿ ವರ್ಷ ತುಂಬಿದರೆ ಮಾತ್ರ ಇದು ವ್ಯವಸ್ಥಿತವಾಗಿ ನಡೆಯುವಂಥದ್ದು ಎಂದು ನನಗನ್ನಿಸುತ್ತದೆ. ಈಗಾಗಲೇ ಸರ್ಕಾರದಿಂದ ಈ ಪಂಚಾಯಿತಿಗಳಿಗೆ ಕುಡಿಯುವ ನೀರಿನ ಸಲುವಾಗಿ ಪ್ರತಿ ವರ್ಷ 24 ಸಾವಿರ ರೂಪಾಯಿಗಳನ್ನು ಮಾತ್ರ ನೀರಿನ ನಿರ್ವಹಣೆಗೆ ಕೊಡುತ್ತಾರೋ, ಇದು 84 ಸಾವಿರ ರೂಪಾಯಿ ಆ ಪಂಚಾಯಿತಿಯವರು ಕೊಡುವುದಕ್ಕಾಗುವುದಿಲ್ಲ. ಈ ಸ್ಕೀಮು ಸರಿಯಾಗಿ ನಡೆಯುವ ಹಾಗೂ ಇಲ್ಲ. ಆ ಹಿನ್ನೆಲೆಯಲ್ಲಿ ಕೆಯುಡಬ್ಲ್ಯುಎಸ್ ನವರಿಗೆ ವಹಿಸಿದ್ದೇ ಆದರೆ ಅಥವಾ ಸರ್ಕಾರವೇ ನಿಯಂತ್ರಣ ಮಾಡುವುದಾದರೆ ಮಾತ್ರ ಇದು ಸರಿಯಾಗಿ ನಡೆಯುತ್ತದೆ. ಆ ಪಟ್ಟಣ ಪಂಚಾಯಿತಿ ಮತ್ತು 18 ಗ್ರಾಮ ಪಂಚಾಯಿತಿಯವರು ಈಗಾಗಲೇ ಮೊನ್ನೆ ನಡೆದ ಒಂದು ಸಭೆಯಲ್ಲಿ ಒಪ್ಪಿಕೊಂಡಿದ್ದಾರೆ. ನಮಗೆ ತುಂಬುವುದಕ್ಕಾಗುವುದಿಲ್ಲ, ಏನು ದುಡ್ಡನ್ನು ಕೊಡತಕ್ಕ ಈ ನೀರಿನ

ನಿರ್ವಹಣೆಗೆ ಕೊಡುವ ಎರಡೂ ಪಟ್ಟಣ ಪಂಚಾಯಿತಿ ಮತ್ತು ಈ ಗ್ರಾಮ ಪಂಚಾಯಿತಿಗಳ ದುಡ್ಡನ್ನು ಸರ್ಕಾರದವರು ಅಲ್ಲೇ ಹಿಡಿದುಕೊಂಡು ತಾವೇ ನಡೆಸಿದ್ದೇ ಆದರೆ ಒಂದು ಅನುಕೂಲವಾಗುತ್ತದೆ ಎನ್ನುವ ಹಿನ್ನೆಲೆಯಲ್ಲಿ ಆ ರೀತಿ ಒಂದು ಮೀಟಿಂಗ್‌ನಲ್ಲಿ ಆಗಿದೆ. ಅದರ ಜೊತೆಗೆ ಮತ್ತೊಂದು ನೀರಿನ ಸಮಸ್ಯೆ ಬಗ್ಗೆ ಹುಕ್ಕೇರಿಯಿಂದ ಹಿರಣ್ಯಕೇಶಿ ನದಿಯಿಂದ 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾದರೆ ತುರ್ತು ಯಾವ್ಯಾಗ ಹಿಡಕಲ್ ಡ್ಯಾಮ್‌ನಿಂದ 24–25 ಕಿಲೋಮೀಟರ್‌ನಿಂದ ನೀರೇನು ಬರುತ್ತದೆ, ಅಲ್ಲಿ ಮೋಟಾರು ಸುಟ್ಟುಹೋದಾಗ ಅಲ್ಲಿ ಪೈಪ್‌ಲೈನ್ ಒಡೆದಾಗ 15 ದಿವಸ ಅಲ್ಲಿ ನೀರಿನ ತೊಂದರೆಯಾಗಿ ನಿಲ್ಲುತ್ತದೆ, ಅಲ್ಲಿ ಕುಡಿಯಲಿಕ್ಕೆ ನೀರು ಸಿಗುವುದಿಲ್ಲ, ಈ ಹಿನ್ನೆಲೆಯಲ್ಲಿ ಎರಡು ಕಿಲೋ ಮೀಟರ್ ಒಂದು ಅರ್ಜುನವಾಡ ಹತ್ತಿರ ಹಿರಣ್ಯಕೇಶಿ ಹುಕ್ಕೇರಿಯ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಯನ್ನು ನಿರ್ಮಿಸಲು ಸರ್ಕಾರದಿಂದ 15 ಲಕ್ಷ ರೂಪಾಯಿಗಳ ಅನುದಾನವನ್ನು ಕೊಟ್ಟರೆ ಸರಿಹೋಗುತ್ತದೆ. ಈಗಾಗಲೇ ಆ ರೀತಿ ಸಂಕೇಶ್ವರ ಪಟ್ಟಣಕ್ಕೆ ಈಗಾಗಲೇ ಒಂದು ನೀರಿನ ವ್ಯವಸ್ಥೆಯನ್ನು ಮಾಡಿದ್ದಾರೆ. ಅಲ್ಲಿ ಬಾಂದಾರದಿಂದ ಮೇಲಿಂದ ಮೇಲೆ ಯಾವಾಗ ಮೋಟಾರ್ ಸುಟ್ಟು ತೊಂದರೆಯಾಗುತ್ತದೆ, ತುರ್ತಾಗಿ ಅದನ್ನು ನಡೆಸುವ ಸಲುವಾಗಿ ಒಂದು ಯೋಜನೆಯನ್ನು ಮಾಡಿದ್ದಾರೆ, ಅದೇ ರೀತಿ ನನಗೆ ಅಲ್ಲಿಯ ಪಟ್ಟಣ ಪಂಚಾಯಿತಿಯವರು ಒಂದು ವರದಿಯನ್ನು ಈಗ ಕೊಟ್ಟಿದ್ದಾರೆ. ಎಂಟು ಇಂಚು ಪಿವಿಸಿ ಪೈಪ್‌ಲೈನನ್ನು ಹಾಕಿ ಒಂದರಿಂದ ಎರಡು ಕಿಲೋ ಮೀಟರ್ ದೂರದಿಂದ ನೀರನ್ನು ತರುವಂಥ ಒಂದು ವಿಚಾರವನ್ನು ಮಾಡಿದರೆ ಇದು ಸುವ್ಯವಸ್ಥಿತವಾಗುತ್ತದೆ ಎನ್ನುವ ಹಿನ್ನೆಲೆಯಲ್ಲಿ ತಾವು ಈ ನಿಟ್ಟಿನಲ್ಲಿ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು. ಅಲ್ಲಿ ಪಟ್ಟಣ ಪಂಚಾಯಿತಿಗಳು ಸಾಕಷ್ಟು ಗಟಾರಗಳು ಸಹಿತ ಇರಲಾರದೆ ಈ ನೀರಿನ ತೊಂದರೆ ಇದೆ. ಆ ದೃಷ್ಟಿಯಲ್ಲಿ ನೀರಿನ ನಿರ್ವಹಣೆಯನ್ನು ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ ಇದನ್ನು ಪರಿಶೀಲಿಸುತ್ತೇವೆ.

ಹಾರ್ನಳ್ಳಿ ರಾಮಸ್ವಾಮಿ, ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವುದರ ಬಗ್ಗೆ

85(14) ಶ್ರೀ ಹೆಚ್. ಆಂಜನೇಯ (ಭರಮಸಾಗರ) : ಮಾನ್ಯ ಮುಖ್ಯಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸರ್ಕಾರವು ರಾಮಸ್ವಾಮಿ ವರದಿಯನ್ನು ಅಂಗೀಕರಿಸಿದೆಯೇ;

ಆ) ಹಾಗಿದ್ದಲ್ಲಿ, ಯಾವ ದಿನಾಂಕದಿಂದ ಅಂಗೀಕರಿಸಲಾಗಿದೆ;

ಇ) ವರದಿಯಲ್ಲಿನ ಶಿಫಾರಸ್ಸುಗಳನ್ನು ಯಾವ ಯಾವ ಇಲಾಖೆಗಳು ಅನುಷ್ಠಾನಗೊಳಿಸಿವೆ?

ಶ್ರೀ ಎನ್. ಧಮಸಿಂಗ್ (ಮುಖ್ಯಮಂತ್ರಿಗಳು) :

ಅ),ಆ) ಶ್ರೀ ಹಾರನಹಳ್ಳಿ ರಾಮಸ್ವಾಮಿ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಕರ್ನಾಟಕ ಆಡಳಿತ ಸುಧಾರಣೆ ಆಯೋಗವು ತನ್ನ ಮಧ್ಯಂತರ ವರದಿ ದಿನಾಂಕ: 20.1.2001ರಂದು ಹಾಗೂ ಅಂತಿಮ ವರದಿಯನ್ನು 27.12.2001ರಂದು ನೀಡಿದೆ. ಸರ್ಕಾರವು ಈ ಶಿಫಾರಸ್ಸುಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಂಡಿದೆ.

ಇ) ಸಂಬಂಧಿಸಿದ ಇಲಾಖೆಗಳು ಆಡಳಿತ ಸುಧಾರಣೆ ಆಯೋಗದ ಶಿಫಾರಸ್ಸುಗಳನ್ನು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಿರುವ ಉನ್ನತ ಮಟ್ಟದ ಅಧಿಕಾರಿಗಳ ಸಮಿತಿ ಹಾಗೂ ಸಚಿವ ಸಂಪುಟದ ಉಪ ಸಮಿತಿಯ ಮುಂದೆ ಮಂಡಿಸುತ್ತಿದೆ. ಈ ಎರಡು